# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಶಿವಾಜಿನಗರ ಉಪವಿಭಾಗ ಹಲಸೂರು ಕೆರೆರಸ್ತೆ, ಬೆಂಗಳೂರು-42**

---

ಸಂಖ್ಯೆ:ಸ.ಇಂ/ವಾ-91/ವಾರ್ಡ್‌ಸಭೆ/11/2022-23 ದಿನಾಂಕ:15-10-2022

**ವಾರ್ಡ್-91 ರ ವಾರ್ಡ್ ಸಭೆಯ ನಡವಳಿ**

ದಿನಾಂಕ: 15-10-2022 ರಂದು ಶಿವಾಜಿನಗರ ಉಪ ವಿಭಾಗ ವಾರ್ಡ್-91, ಭಾರತಿನಗರ ವಾರ್ಡ್ ಕಛೇರಿಯಲ್ಲಿ ಶ್ರೀ.ಪದ್ಮರಾಜ್, ವಾರ್ಡ್-91 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

**ಹಾಜರಿದ್ದವರು:**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ಪದ್ಮರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ ಪೂರ್ವ) ಹಾಗೂ ನೋಡಲ್ ಅಧಿಕಾರಿ ವಾರ್ಡ್-91 |
| 2 | ಶ್ರೀ ಪ್ರವೀಣ್.ಎನ್.ಎಂ, | ಸಅ ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಂಖ್ಯೆ:91 |
| 3 | ಶ್ರೀ ಸತೀಶ್ | ಕಂದಾಯ ಪರಿವೀಕ್ಷಕರು |
| 4 | ಶ್ರೀ ಕಾರ್ತಿಕ್ | ಕಿರಿಯ ಆರೋಗ್ಯ ಪರಿವೀಕ್ಷಕರು |

**ಮಾನ್ಯ ನೋಡಲ್ ಅಧಿಕಾರಿರವರು ಸ್ವಾಗತದೊಂದಿಗೆ ಅಧಿಕಾರಿಗಳ / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಬಿಸಲಾಯಿತು.**

- ಆಗಿಂದಾಗ್ಗೆ ಮಳೆಯಾಗುತ್ತಿರುವುದರಿಂದ ಮಳೆಯಿಂದ ಹಲವಾರು ರೀತಿಯಲ್ಲಿ ತೊಂದರೆಯುಂಟಾಗುತ್ತಿರುವುದು ಕಂಡುಬಂದಿರುತ್ತದೆ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಮತ್ತು ಮಳೆಯಿಂದ ಹಾನಿಗೊಳಗಾಗುವ ಪ್ರದೇಶವನ್ನು ತುರ್ತಾಗಿ ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.

- ಕಸ ವಿಲೇವಾರಿ ಸಮಯಕ್ಕೆ ಹೋದರು ಕೂಡ ಕೆಲವೊಂದು ಕಡೆ ಸಾರ್ವಜನಿಕರಿಂದ ಒಳ್ಳೆಯ ರೀತಿಯ ಸ್ಪಂದನೆ ಇರುವುದಿಲ್ಲ ಆದ್ದರಿಂದ ಸಾರ್ವಜನಿಕರಿಗೆ ಸ್ವಚ್ಛತ್ತ ಕಾರ್ಯದ ಬಗ್ಗೆ ಅರಿವು ಮೂಡಿಸಲು ಸ್ವಚ್ಚತೆಯನ್ನು ಕಾಪಾಡಲು ಮತ್ತು ಪ್ರಚಾರ ಮಾಡಲು ತಿಳಿಸಿರುತ್ತಾರೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ)**

- ವಾರ್ಡಿನಲ್ಲಿ ಹಸುಗಳ ಮಾಲೀಕರುರವರು ಹಸುಗಳನ್ನು ರಸ್ತೆಗಳ ಮೇಲೆ ಹಾಗೆಯೇ ಬಿಟ್ಟುಹೋಗುತ್ತಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯುಂಟಾಗುತ್ತಿದ್ದು, ಟ್ರಾಫಿಕ್ ಜಾಮ್ ಆಗುತ್ತಿರುವುದು ಕಂಡುಬರುತ್ತಿರುವುದುರಿಂದ ಇದಕ್ಕೆ ಸಂಬಂಧಪಟ್ಟ ಮಾಲೀಕರುಗಳಿಗೆ ಅರಿವು ಮೂಡಿಸಿ ಹಸುಗಳನ್ನು ಬೀದಿಯಲ್ಲಿ ಬಿಡಬಾರದು ಎಂದು ತಿಳಿಸಲು ಮತ್ತೇ ಈ ರೀತಿ ಮರುಕಳಸದಂತೆ ಎಚ್ಚರಿಕೆ ನೀಡಲು ಸಂಬಂಧಪಟ್ಟ ಅಧಿಕಾರಿರವರಿಗೆ ಸೂಚಿಸಿರುತ್ತಾರೆ.

**(ಅನಿಮಲ್ ಹಜ್‌ಬಂಡರಿ ವೆಟರ್ನರಿ ಇನ್ಸ್‌ಪೆಕ್ಟರ್)**

- ರಸಲ್ ಮಾರ್ಕೆಟ್‌ನ ಮೊದಲನೆ ಮಹಡಿಯಲ್ಲಿ ತರಕಾರಿ ವ್ಯಾಪಾರಿಯವರು ಉಳಿದಿರುವ ತರಕಾರಿಯನ್ನು ಹಾಗೆಯೇ ಮಾರುಕಟ್ಟೆಯಲ್ಲಿ ಬಿಟ್ಟುಹೋಗುತ್ತಿರುವುದರಿಂದ ಕಸ ಕೊಳೆತು ಹೋಗಿ ಸಮರ್ಪಕವಾಗಿ ಕಸ ವಿಲೇವಾರಿ ಯಾಗದೆ ವಾಸನೆ ಉಂಟಾಗುತ್ತಿದ್ದು, ಅದರಿಂದ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ತುಂಬಾ ತೊಂದರೆಯಾಗುತ್ತಿದೆ ಎಂದು ಮತ್ತು ರಸಲ್ ಮಾರ್ಕೆಟ್‌ನ ಸುತ್ತಮುತ್ತಲು ಇಂಟೆನ್ಸಿವ್ ಕ್ಲೀನಿಂಗ್ ಕೈಗೊಳ್ಳುವಂತೆ ಇದರ ಬಗ್ಗೆ ಕ್ರಮವಹಿಸಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ

**ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ಶಿವಾಜಿನಗರ)**

- ನಗರೋತ್ಥಾನ 2020-21 ನೇ ಸಾಲಿನ ಕಾಮಗಾರಿಯು ಪ್ರಗತಿಯಲ್ಲಿದ್ದು ಸಂಬಂಧಪಟ್ಟ ಗುತ್ತಿಗೆದಾರರು ಕೆಲಸವನ್ನು ತ್ವರಿತವಾಗಿ ಮುಗಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಅನುವುಮಾಡಿಕೊಡಲು ನೋಡಲ್ ಅಧಿಕಾರಿರವರು ಮಾತಾನಡುತ್ತ ಸಹಾಯಕ ಅಭಿಯಂತರರಿಗೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ತಿಳಿಸಲು ಸೂಚಿಸಿರುತ್ತಾರೆ.

- ಕಲ್ಯಾಣ ಕಾರ್ಯಕ್ರಮಗಳು ಅಡಿಯಲ್ಲಿ ಹೊರಡಿಸಿರುವ ಯೋಜನೆಗಳೂ ಹಾಗೂ ಒಂಟಿ ಮನೆ ನಿರ್ಮಾಣ ಮಾಡಲು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದವರಿಗೆ ಬಿಬಿಎಂಪಿ ವತಿಯಿಂದ ನೀಡುವ ವಿವಿಧ ಕಲ್ಯಾಣ ಯೋಜನೆಗಾಗಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ನೀಡಲು ಸೂಚಿಸಿದರು.

<u>ಕಲ್ಯಾಣ ಇಲಾಖೆ ಶಿವಾಜಿನಗರ</u>

- ಜಂಟಿ ಆಯುಕ್ತರು(ಪೂರ್ವ) ರವರು ಮಾತಾನಾಡುತ್ತ ಗುರುತಿನ ಚೀಟಿಗಳನ್ನು (Voter List) ಪರಿಶೀಲನೆಗಳನ್ನು ಮಾಡಿ ಯಾಪ್‌ನ ಮೂಲಕ ಗುರುತಿನ ಚೀಟಿಗಳನ್ನು (Voter List) ಲಿಂಕ್ ಮಾಡಲು ಸಂಬಂಧಪಟ್ಟ ಕಂದಾಯ ಪರಿವೀಕ್ಷಕರಿಗೆ ತಿಳಿಸಿರುತ್ತಾರೆ. ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸಲು ಕ್ಯಾಂಪ್‌ಗಳನ್ನು ನಡೆಸಲು ಸೂಚಿಸಿರುತ್ತಾರೆ ಮತ್ತು ಇದರ ಬಗ್ಗೆ ಆಟೋ ಪ್ರಚಾರ ಮಾಡಲು ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್‌ಗಳಿಗೆ ತಿಳಿಸಿರುತ್ತಾರೆ.

<u>ಸಹಾಯಕ ಕಂದಾಯ ಅಧಿಕಾರಿ (ಶಿವಾಜಿನಗರ)</u>

- ಸ್ಮಾರ್ಟ್ ಸಿಟಿ ಕೆಲಸವು ರಸಲ್ ಮಾರ್ಕೆಟ್ ಸುತ್ತಮುತ್ತ ಪ್ರಗತಿಯಲ್ಲಿದ್ದು ಶೀಘ್ರವಾಗಿ ಕಾಮಗಾರಿಯನ್ನು ಮುಗಿಸಲು ಸಾರ್ವಜನಿಕರಿಂದ ದೂರು ಬಂದಿದ್ದು ಸಂಬಂಧಪಟ್ಟವರಿಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

**(ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಸ್ಮಾರ್ಟ್ ಸಿಟಿ ಲಿ.ಟಿ)**

- ವಾರ್ಡ್‌ವಾರು ಪ್ರದೇಶದ ಸ್ಥಳಗಳಲ್ಲಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಲು ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಚರ್ಚಿಸಲಾಗಿ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರಿಗೆ ವಾರ್ಡ್ ಪ್ರದೇಶದ ಆಯ್ದ ಸ್ಥಳಗಳಲ್ಲಿ ಔಷಧಿ ಸಿಂಪಡಿಸಲು ಸೂಚಿಸಿರುತ್ತಾರೆ ಮತ್ತು ರಸಲ್ ಮಾರುಕಟ್ಟೆ ಒಳಾಂಗಣದಲ್ಲಿರುವ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಿ ಸ್ವಚ್ಛಗೊಳಿಸಲು ಸಭಾ ಗಮನಕ್ಕೆ ತರಲಾಗಿ ಈ ಬಗ್ಗೆ ಚರ್ಚಿಸಲಾಗಿ ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ ಕ್ರಮವಹಿಸಲು ತಿಳಿಸಿರುತ್ತಾರೆ.

- ವಾರ್ಡ್ ಪ್ರದೇಶದ ರಸ್ತೆಗಳಲ್ಲಿ ಮತ್ತು ಪಾದಚಾರಿ ರಸ್ತೆಗಳಲ್ಲಿ ಮಣ್ಣು ಮತ್ತು ಅನುಪಯುಕ್ತ ಡೆಬ್ರೀಸ್‌ನ್ನು ರಾತ್ರಿ ಹೊತ್ತಿನಲ್ಲಿ ಸುರಿಯುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಹಾಗೂ ಪಾದಚಾರಿಗಳಿಗೆ ಓಡಾಡಲು ತುಂಬಾ ತೊಂದರೆಯುಂಟಾಗುತ್ತಿರುತ್ತದೆ. ಆದುದರಿಂದ ಸದರಿ ಮಣ್ಣು ಮತ್ತು ಅನುಪಯುಕ್ತ ಡೆಬ್ರೀಸನ್ನು ತೆರವುಗೊಳಿಸಲು ಅವಶ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಈ ಸಂಬಂಧ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾತನಾಡುತ್ತಾ, ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.

- ಮೇಮೋರಿಯಲ್ ಪಾರ್ಕ್ ಅನ್ನು ಸೂಕ್ತ ರೀತಿಯಲ್ಲಿ ನಿರ್ವಹಣಾ ಕಾರ್ಯವನ್ನು ನಿರ್ವಹಿಸಲು ತೋಟಗಾರಿಕಾ ಇಲಾಖೆರವರಿಗೆ ತಿಳಿಸಲು ಸೂಚಿಸಿರುತ್ತಾರೆ.

**(ಅಧೀಕ್ಷಕ, ತೋಟಗಾರಿಕ ಇಲಾಖೆ)**

- ರಸ್ತೆಬದಿಯ ಬೀದಿಬದಿ ವ್ಯಾಪಾರಿಗಳೂ ವ್ಯಾಪಾರ ಮಾಡಿದ ನಂತರ ತ್ಯಾಜ್ಯವಸ್ತುಗಳನ್ನು ಅಲ್ಲಿಯೇ ಬೀಸಾಡಿ ಹೋಗುತ್ತಿರುವುದರಿಂದ ರಸ್ತೆಯ ಅಕ್ಕಪಕ್ಕ ಕಸಗಳು ಹಾಗೆಯೇ ಬಿದ್ದು ಸೊಳ್ಳೆ ಮತ್ತು ಟ್ರಾಫಿಕ್ ಜಾಮ್ ಈ ರೀತಿ ಹಲವಾರು ತೊಂದರೆಗಳು ಉಂಟಾಗುತ್ತಿದ್ದು ಈ ರೀತಿ ಮರುಕಳಿಸದಂತೆ ರಸ್ತೆ ಬದಿಯ ವ್ಯಾಪಾರಿಗಳಿಗೆ ವಾರ್ನ್ ಮಾಡಲು ತಿಳಿಸಿರುತ್ತಾರೆ.

<u>ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ಶಿವಾಜಿನಗರ)</u>

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು ಹಾಗು ಹಾಜರಿದ್ದ ಸಾರ್ವಜನಿಕರಿಗೆ ಕಸ ವಿಲೇವಾರಿ ಬಗ್ಗೆ ಆದಷ್ಟು ಗಮನವಹಿಸಿ ಸಹಕರಿಸಿದಲ್ಲಿ ದಿನನಿತ್ಯದ ಕಸ ವಿಲೇವಾರಿ ಸಮಯದಲ್ಲಿ ಸಮರ್ಪಕವಾಗಿ ನಿರ್ವಹಿಸಲು ಗುತ್ತಿಗೆದಾರರು ಸಹಾಯವಾಗುತ್ತದೆ.

ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಸುತ್ತಾ ಮೇಲೆ ತಿಳಸಿರುವ ಎಲ್ಲಾ ಆಕ್ಷೇಪಣೆಗಳನ್ನು ಸಂಬಂಧಪಟ್ಟ ಇಲಾಖೆರವರಿಗೆ ತಿಳಿಸಿ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ನೋಡಲ್ ಅಧಿಕಾರಿರವರ ಸೂಚನೆಗಳಂತೆ ನಡವಳಿಗಳನ್ನು ತಯಾರಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಿರುತ್ತಾರೆ.

(ಪ್ರವೀಣ್.ಎನ್.ಎಂ)
ಸ.ಅ.ಕಾರ್ಯದರ್ಶಿ
ವಾರ್ಡ್-91, ಭಾರತಿನಗರ